ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು

ಸಂ. ಗಣಕಶಾಖೆ/ಎಸ್.ಎಸ್.ಎಲ್.ಸಿ/ನೋಂದಣಿ/01/2017-18 ದಿನಾಂಕ 27/12/2017

## - ಸುತ್ತೋಲೆ -

ವಿಷಯ : ಏಪ್ರಿಲ್-2018 ರ ಎಸ್.ಎಸ್.ಎಲ್.ಸಿ ಪರೀಕ್ಷೆಯ ವಿದ್ಯಾರ್ಥಿಗಳ ನೋಂದಣಿ ಮಾಹಿತಿಗಳನ್ನು ಎಸ್.ಎ.ಟಿ.ಎಸ್ ಜಾಲತಾಣದಲ್ಲಿ ಶಾಲಾ ಹಂತದಲ್ಲಿ ಅಪ್‌ಲೋಡ್ ಮಾಡುವ ಹಾಗು ಫ್ರೀಜ್ ಮಾಡುವ ದಿನಾಂಕವನ್ನು ವಿಸ್ತರಿಸುತ್ತಿರುವ ಬಗ್ಗೆ.

ಉಲ್ಲೇಖ : 1) ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಅನುಮೋದನೆ ದಿನಾಂಕ 13/11/2017

2) ದಿನಾಂಕ 15/11/2017 ರಂದು ರಾಜ್ಯ ಯೋಜನಾ ಕಛೇರಿಯ ಸಭೆಯ ನಡಾವಳಿ

3) ಈ ಕಛೇರಿಯ ಅಧಿಸೂಚನೆ ಸಂ. ಎ8/ಎಸ್.ಎಸ್.ಎಲ್.ಸಿ.ಅಧಿಸೂಚನೆ/ಏಪ್ರಿಲ್-2018/2017-18 ದಿನಾಂಕ 08/08/2017 ಹಾಗೂ ಸುತ್ತೋಲೆ ದಿನಾಂಕ 16/11/2017, 06/12/2017 ಮತ್ತು 20/12/2017

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಮಾರ್ಚ್-2018 ವಿದ್ಯಾರ್ಥಿಗಳ ನೋಂದಣಿ ಕಾರ್ಯವನ್ನು ಆನ್‌ಲೈನ್ ಮೂಲಕ ಅಪ್‌ಲೋಡ್ ಮಾಡುವಂತೆ ಹಾಗೂ ಈಗಾಗಲೇ ಅಪ್ ಲೋಡ್ ಮಾಡಿರುವ ಮಾಹಿತಿಗಳನ್ನು ಪರಿಶೀಲಿಸಲು (validation) ಮತ್ತು ಪ್ರಶ್ನೆ ಪತ್ರಿಕೆ ಬೇಡಿಕೆ ಪಟ್ಟಿಗಳನ್ನು (qpr or indent) ಧೃಡೀಕರಿಸಿ ಶಾಲಾ ಹಂತದಲ್ಲಿ ಮಾಹಿತಿಗಳನ್ನು ಫ್ರೀಜ್ ಮಾಡಲು ಆದೇಶಿಸಿ ದಿನಾಂಕ 28/12/2017 ರವರೆಗೆ ಅವಧಿಯನ್ನು ವಿಸ್ತರಿಸಿ ನಿಗದಿಪಡಿಸಲಾಗಿತ್ತು. ಪ್ರಸ್ತುತ ಅನೇಕ ಶಾಲೆಗಳ ವಿದ್ಯಾರ್ಥಿಗಳ ಮಾಹಿತಿಗಳಲ್ಲಿ ಹೆಸರಿನ ಮುಂದೆ ಕ್ರಾಸ್ (X) ಚಿನ್ಹೆ ತೋರುತ್ತಿದ್ದು ವ್ಯಾಲಿಡೇಶನ್ (validation) ಮತ್ತು ಇಂಡೆಂಟ್ (qpr or indent) ಪ್ರಕ್ರಿಯೆಯನ್ನು ಪುನಃ ಮಾಡಬೇಕಾಗಿರುವುದರಿಂದ ನೋಂದಣಿ ಹಾಗೂ ಪರಿಶೀಲನೆ/ಫ್ರೀಜ್ ಅವಧಿಯನ್ನು ವಿಸ್ತರಿಸುವಂತೆ ಕೋರಿ ದೂರವಾಣಿ ಮೂಲಕ ಮನವಿಗಳು ಸ್ವೀಕೃತವಾಗಿವೆ.

ಈ ಹಿನ್ನೆಲೆಯಲ್ಲಿ ಮಾಹಿತಿಗಳ ಅಪ್‌ಲೋಡ್, ವ್ಯಾಲಿಡೇಶನ್, ಪ್ರಶ್ನೆ ಪತ್ರಿಕೆ ಇಂಡೆಂಟ್ ಪರಿಶೀಲನಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಫ್ರೀಜ್ ಮಾಡುವ ಅವಧಿಯನ್ನು ಅಂತಿಮವಾಗಿ ದಿನಾಂಕ 08/01/2018 ರವರೆಗೆ ವಿಸ್ತರಿಸಲಾಗಿದೆ. ಜಿಲ್ಲಾ ನೋಡಲ್ ಅಧಿಕಾರಿಗಳು ಶಾಲಾ ಹಂತಕ್ಕೆ ಈ ಬಗ್ಗೆ ಮಾಹಿತಿ ನೀಡಿ ತಮ್ಮ ಜಿಲ್ಲೆಗಳ ಮಾಹಿತಿಗಳು ನಿಖರವಾಗಿರುವಂತೆ ಕ್ರಮ ಕೈಗೊಳ್ಳುವುದು. ಈ ಬಗ್ಗೆ ಏನಾದರೂ ಹೆಚ್ಚಿನ ಮಾಹಿತಿಗಳು ಅಗತ್ಯವಾಗಿದ್ದಲ್ಲಿ ಮಂಡಳಿಯ ಸಹಾಯವಾಣಿಯನ್ನು ಸಂಪರ್ಕಿಸುವುದು.

(ಸುಮಂಗಲ. ವಿ) 27/12

ನಿರ್ದೇಶಕರು (ಪರೀಕ್ಷೆಗಳು)

ಅಗತ್ಯ ಕ್ರಮಕ್ಕಾಗಿ :

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರುಗಳಿಗೆ

ಪ್ರತಿಗಳನ್ನು

2. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಹಾಗು ಪ್ರೌಢಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು
3. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ
4. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಶಿಅ/ರಾಮಾಶಿಅ, ಬೆಂಗಳೂರು
5. ಮಾನ್ಯ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ
6. ಮಾನ್ಯ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರ್ಗಿ
7. ನಿರ್ದೇಶಕರು, ಪ್ರೌಢಶಿಕ್ಷಣ, ಮಾನ್ಯ ಆಯುಕ್ತರ ಕಛೇರಿ. ಬೆಂಗಳೂರು
8. ವಿಭಾಗೀಯ ಸಹನಿರ್ದೇಶಕರು, ಬೆಂಗಳೂರು, ಮೈಸೂರು, ಬೆಳಗಾಂ ಹಾಗು ಕಲಬುರ್ಗಿ ವಿಭಾಗಗಳು

ಇವರುಗಳಿಗೆ ಗೌರವಪೂರ್ವಕವಾಗಿ ಸಲ್ಲಿಸಿದೆ.